<u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,</u>
<u>ನ್ಯಾಯಾಲಯ,ಹೊಸದುರ್ಗ.</u>

ಸಿ.ಸಿ.ಸಂಖ್ಯೆ: **1406/2024** ದಿನಾಂಕ: **27-07-2026**

ಪಿ.ಡಬ್ಲ್ಯೂ:**1**

<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲು ಃ  ಆರೋಪಿಯ ಪರ ಶ್ರೀ ಬಿ.ಜಿ.ಎಂ ವಕೀಲರಿಂದ</u>

1. ನಾನು ಟೈಲರಿಂಗ್ ಕೆಲಸ ಮಾಡುತ್ತೇನೆ. ಸಾಕ್ಷಿ ವ್ಯವಸಾಯ ಸಹ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಾನು ಬಿದರಕೆರೆಯಲ್ಲಿ ವಾಸವಿದ್ದು ಅದೇ ಗ್ರಾಮದಲ್ಲಿ ಟೈಲರಿಂಗ್ ಕೆಲಸ ಮಾಡುತ್ತೇನೆ.  ಆರೋಪಿ ನನ್ನ ತಂದೆಯ ತಂಗಿಯ ಮಗಳು. ನನ್ನ ಮತ್ತು ಆರೋಪಿಯ ನಡುವೆ 10 ವರ್ಷಗಳ ಹಿಂದಿನಿಂದಲೂ ಹಣದ ವ್ಯವಹಾರ ಇರುತ್ತದೆ.  ಆರೋಪಿ ಮತ್ತು ಆರೋಪಿಯ ಗಂಡ ಆಗಾಗ ಅವಶ್ಯವಿದ್ದ ಹಣ ನನ್ನಿಂದ ಪಡೆದು ಅನುಕೂಲವಾದಾಗ ವಾಪಸ್ ನೀಡುತ್ತಿದ್ದರು. ನಾನು ಹಣವನ್ನು ಬಡ್ಡಿಗೆ ನೀಡುತ್ತಿರಲಿಲ್ಲ. ಆರೋಪಿ 10 ಸಾವಿರ, 20 ಸಾವಿರ, 50 ಸಾವಿರದಂತೆ ಸಾಲವನ್ನು ನಗದು ರೂಪದಲ್ಲಿ ಪಡೆದು ಅದನ್ನು ನಗದು ರೂಪದಲ್ಲಿ ಫೋನ್ ಪೇ ಆನ್ ಲೈನ್ ಮೂಲಕ ಮರುಪಾವತಿ ಮಾಡುತ್ತಿದ್ದರು.

2. ನಾನು ಎಂಟು ಲಕ್ಷ ರೂ ಗಳನ್ನು ನಗದು ರೂಪದಲ್ಲಿ ಒಂದೇ ಬಾರಿಗೆ ಆರೋಪಿಗೆ ಪಾವತಿ ಮಾಡಿರುತ್ತೇನೆ. ನಾನು ದಿನಕ್ಕೆ ರೂ.800 ರಿಂದ 1,000 ರೂ ಗಳನ್ನು ಟೈಲರಿಂಗ್ ಕೆಲಸದಿಂದ ದುಡಿಯುತ್ತೇನೆ. ಈ ಬಗ್ಗೆ ನಾನು ದಾಖಲೆಗಳನ್ನು ನೀಡಿರುವುದಿಲ್ಲ. ಸದರಿ ನಗದು ಹಣವನ್ನು 500 ರೂ ಮುಖ ಬೆಲೆಯ ನೋಟುಗಳಲ್ಲಿಯೇ ನೀಡಿರುತ್ತೇನೆ.  ನನಗೆ ಸೇರಿದ 1 ಎಕರೆ 2 ಗುಂಟೆ ಜಮೀನು ಇದ್ದು ಅದರಲ್ಲಿ ರಾಗಿ, ಮೆಕ್ಕೇ ಜೋಳ ಬೆಳೆಯುತ್ತೇನೆ. ವರ್ಷಕ್ಕೆ ಸುಮಾರು 13 ಕ್ವಿಂಟಲ್ ರಾಗಿ ಹಾಗೂ 10 ಕ್ವಿಂಟಲ್ ಮೆಕ್ಕೇ ಜೋಳ ಬೆಳೆಯುತ್ತೇನೆ. ಅದನ್ನು ಮಾರಾಟ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರು

ಮಾಡಿರುವುದಿಲ್ಲ. ಟೈಲರಿಂಗ್ ಮತ್ತು ವ್ಯವಸಾಯ ಬಿಟ್ಟು ನಾನು ಬೇರೆ ಯಾವುದೇ ವ್ಯವಹಾರ ಮಾಡುವುದಿಲ್ಲ.

3. ನಾನು ಆರೋಪಿಗೆ ಹಣ ನೀಡಿದಾಗ ಯಾವುದೇ ಭದ್ರತೆ ಪಡೆದಿರುವುದಿಲ್ಲ. ಕಾರಣ ಒಂದು ತಿಂಗಳಲ್ಲಿ ಆರೋಪಿ ಹಣ ವಾಪಸ್ ನೀಡುವುದಾಗಿ ತಿಳಿಸಿದ್ದರು. ಸದರಿ ಹಣಕ್ಕೆ ನಾನು ಯಾವುದೇ ಬಡ್ಡಿ ಪಡೆದಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡಿರುವುದಿಲ್ಲ.

(**ವಕೀಲರು ಮುಂದುವರೆದ** ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು. )

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.